# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ¨AU – 4J<br>Part – IVA | ಬೆಂಗಳೂರು, ಸೋಮವಾರ,19,ಅಕ್ಟೋಬರ್, 2020( ಆಶ್ವಯುಜ, 27, ಶಕವರ್ಷ ೧೯೪2)<br>Bengaluru, MONDAY,19,OCTOBER,2020( Aashwayuja,27, ShakaVarsha 1942) | ನಂ. 484<br>No. 484 |


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 52 ಶಾಸನ 2020, ಬೆಂಗಳೂರು, ದಿನಾಂಕ: 19.10.2020**

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ವಿಧೇಯಕ, 2020 **-** ಇದಕ್ಕೆ 2020 ರ ಅಕ್ಟೋಬರ್ ತಿಂಗಳ 16ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 29 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2020 ರ ಕರ್ನಾಟಕ ಅಧಿನಿಯಮ ಸಂಖ್ಯೆ: 29

**(2020 ರ ಅಕ್ಟೋಬರ್ ತಿಂಗಳ 19 ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)**

## ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2020

**(2020 ರ ಅಕ್ಟೋಬರ್ ತಿಂಗಳ 16 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)**

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) (ತಿದ್ದುಪಡಿ) ಅಧಿನಿಯಮ, 2020 ಎಂದು ಕರೆಯತಕ್ಕದ್ದು.

(2) ಇದು 2020ರ ಜುಲೈ 2ನೇ ದಿನದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಅಧಿನಿಯಮ, 2002ರ (2003ರ ಕರ್ನಾಟಕ ಅಧಿನಿಯಮ 45) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(1) (iಎ) ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಕಾನೂನು ಮಾಪನ ಅಧಿನಿಯಮ, 2009 (2010ರ ಕೇಂದ್ರ ಅಧಿನಿಯಮ 1) ಅಥವಾ ಅದರಡಿಯಲ್ಲಿ ಮಾಡಲಾದ ನಿಯಮಗಳು, ಕರ್ನಾಟಕ ಪೌರಸಭೆಗಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 22), ಕರ್ನಾಟಕ ನಗರ ಪಾಲಿಕೆಗಳ ಅಧಿನಿಯಮ, 1976 (1977ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993ರ ಕರ್ನಾಟಕ ಅಧಿನಿಯಮ 14), ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 18), ಅಗ್ನಿಶಾಮಕ ದಳ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 42), ಕರ್ನಾಟಕ ಮರಗಳ ಸಂರಕ್ಷಣೆ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 76), ಕರ್ನಾಟಕ ಅರಣ್ಯ ನಿಯಮಗಳು, 1969, ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 (1964ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 10), ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1976 (1976ರ ಕರ್ನಾಟಕ ಅಧಿನಿಯಮ 12), ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ, 1987 (1987ರ ಕರ್ನಾಟಕ ಅಧಿನಿಯಮ 34), ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961 (1963ರ ಕರ್ನಾಟಕ ಅಧಿನಿಯಮ 11), ಮತ್ತು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ನೀತಿಗಳು".

(ii) (vii)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(vii-ಎ) "ಉತ್ಪಾದನಾ ಉದ್ಯಮ" ಎಂದರೆ ಕೈಗಾರಿಕೆಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1951ರ ಮೊದಲನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಕೈಗಾರಿಕೆಗೆ ಸಂಬಂಧಪಟ್ಟ ಸರಕುಗಳ ಉತ್ಪಾದನೆ ಅಥವಾ ತಯಾರಿಕೆಗೆ ಸಂಬಂಧಪಟ್ಟ ಸರಕುಗಳ ಉತ್ಪಾದನೆ ಅಥವಾ ತಯಾರಿಕೆಯಲ್ಲಿ ತೊಡಗಿರುವ ಉದ್ಯಮ, ಅಥವಾ ವಿಶಿಷ್ಟವಾದ ಹೆಸರು ಅಥವಾ ಸ್ವಭಾವ ಅಥವಾ ಉಪಯೋಗವನ್ನು ಹೊಂದಿರುವ ಅಂತಿಮ ಉತ್ಪನ್ನಕ್ಕೆ ಮೌಲ್ಯವರ್ಧನೆಯ ಪ್ರಕ್ರಿಯೆಯಲ್ಲಿ ಬಳಸಲಾದ ಕಾರ್ಖಾನೆ ಮತ್ತು ಯಂತ್ರಘಟಕ.

(vii-ಬಿ) "ಉತ್ಪಾದನಾ ಕೈಗಾರಿಕೆ" ಎಂದರೆ ಪದಾರ್ಥಗಳ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ತೊಡಗಿರುವ ಮತ್ತು ಹೊಸ ಸಾಮಗ್ರಿಗಳ ಸೃಜನೆ ಅಥವಾ ಮೌಲ್ಯ ವರ್ಧನೆಯಲ್ಲಿ ನಿರತವಾಗಿರುವ ಕೈಗಾರಿಕೆ".

**3.13ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ (ಜಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಚ್) ಉತ್ಪಾದನಾ ಕೈಗಾರಿಕೆಗಳು ಅಥವಾ ಉದ್ಯಮಗಳಿಂದ ಸಂಯೋಜಿತ ಅರ್ಜಿ ನಮೂನೆಯನ್ನು ಸ್ವೀಕರಿಸಿದ ಮೇಲೆ, ಸಂಬಂಧಪಟ್ಟ ನೋಡಲ್ ಏಜೆನ್ಸಿಯು ಹೂಡಿಕೆ ಸಮಿತಿಗಳಿಂದ ಅಂದರೆ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ, ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ ಅಥವಾ ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿಗಳ ಅನುಮೋದನೆಯನ್ನು ಪಡೆದ ತರುವಾಯ, ನಿಯಮಿಸಿದ ನಮೂನೆಯಲ್ಲಿ ಅರ್ಜಿದಾರರಿಗೆ ಸ್ವೀಕೃತಿ ಪ್ರಮಾಣ ಪತ್ರವನ್ನು ಹೊರಡಿಸತಕ್ಕದ್ದು:

ಪರಂತು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಅದನ್ನು ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಉದ್ದೇಶಕ್ಕಾಗಿ ಭೂಮಿಯನ್ನು ಪರಿಗಣಿಸತಕ್ಕದ್ದು.

(ii) (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮದ ಸಂಬಂಧದಲ್ಲಿ, (1)ನೇ ಉಪಪ್ರಕರಣದ (ಎಚ್) ಖಂಡದ ಅಡಿಯಲ್ಲಿ ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರವು, ಸಂಬಂಧಿತ ಇಲಾಖೆಗಳು ಮಂಜೂರು ಮಾಡಿದ ಅಥವಾ ಹೊರಡಿಸಿದ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಗಳ ಆರಂಭದ ದಿನಾಂಕದವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ, ಅದರ ಸ್ವೀಕೃತಿಯ ದಿನಾಂಕದಿಂದ, 2ನೇ ಪ್ರಕರಣದ (iii)ನೇ ಉಪಪ್ರಕರಣದಲ್ಲಿ ಪರಿಭಾಷಿಸಿದಂತೆ ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗಾಗಿ ಒಪ್ಪಿಗೆ ನೀಡಿಕೆಗಳು ಎಂಬುದಾಗಿ ಭಾವಿಸತಕ್ಕದ್ದು:

ಪರಂತು, ಕೈಗಾರಿಕೆಯ ರಚನೆಗಾಗಿ ಅಂಥ ಭಾವಿತ ಒಪ್ಪಿಗೆ ನೀಡಿಕೆಯು, ಯಾವ ಉದ್ದೇಶಕ್ಕಾಗಿ ಅದನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆಯೋ ಅಥವಾ ಯಾವ ಅನುಮತಿಗಾಗಿ ಅರ್ಜಿ ಸಲ್ಲಿಸಲಾಗಿದೆಯೋ ಆ ಭೂಮಿಗೆ ಮಾತ್ರವೇ ಆಗಿರತಕ್ಕದ್ದು. ಮುಂದುವರೆದು, ಕಟ್ಟಡ ಉಪವಿಧಿಯ ಅನುಸಾರವಾಗಿ ನಿರ್ಮಾಣದಲ್ಲಿ ಮತ್ತು ಅನ್ವಯಿಸಬಹುದಾದ ಯಾವುದೇ ಅಧಿನಿಯಮ ಅಥವಾ ಅಂಥ ನಕ್ಷೆಯು ಜಾರಿಯಲ್ಲಿರುವ ಪ್ರಮುಖ ನಕ್ಷೆಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯ ಬಳಕೆಯಲ್ಲಿ ಯಾವುದೇ ಅನ್ಯಮಾರ್ಗವಿರತಕ್ಕದ್ದಲ್ಲ;

ಮತ್ತು ಪರಂತು, ಅನುಮೋದನೆಗಳು ಸ್ಪಷ್ಟ ಹಕ್ಕು (clear title) ಇಲ್ಲದ ಭೂಮಿ ಅಥವಾ ವಿವಾದಿತ, ನಿರ್ಬಂಧಿತ ಪ್ರವರ್ಗಗಳು ಮುಂತಾದವುಗಳ ಅಡಿಯಲ್ಲಿ ಬರುವ ಭೂಮಿಗಳ ಬಳಕೆಗಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮಗಳನ್ನು ಹಕ್ಕುಳ್ಳವರನ್ನಾಗಿ ಮಾಡತಕ್ಕದ್ದಲ್ಲ. ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಸ್ವಾಧೀನ ಪಡಿಸಿಕೊಳ್ಳಬಹುದಾದ ಅಥವಾ ಬಳಸಬಹುದಾದ ಪ್ರದೇಶದ ಗರಿಷ್ಠ ಪರಿಮಿತಿಯಲ್ಲಿ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ (1962ರ ಕರ್ನಾಟಕ ಅಧಿನಿಯಮ 10) 109ನೇ ಪ್ರಕರಣದ ಅಡಿಯಲ್ಲಿನ ಉಪಬಂಧಗಳಲ್ಲಿರುವಂತೆ ಮಿತಿಯಲ್ಲಿರತಕ್ಕದ್ದು.

**ವಿವರಣೆ:** (3)ನೇ ಉಪಪ್ರಕರಣದ ಅನುಸಾರವಾಗಿ ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸ್ಥಾಪನೆಯಾದರೆ, ವಾಣಿಜ್ಯ ಕಾರ್ಯಾಚರಣೆಯ ಪ್ರಾರಂಭಕ್ಕೆ ಮೊದಲು, 14ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳ ಅನುಸಾರವಾಗಿ ಅಗತ್ಯ ಒಪ್ಪಿಗೆಗಳನ್ನು ಅರ್ಜಿದಾರರು ಪಡೆಯುವುದು.

(4) ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಮತ್ತು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆಗೆ ಹಲವು ಶಾಸನಗಳು, ಅಧಿನಿಯಮಗಳು, ನಿಯಮಗಳು ಅಥವಾ ವಿನಿಯಮಗಳ ಅಡಿಯಲ್ಲಿ ನೋಡಲ್ ಏಜೆನ್ಸಿಯ ಮೇರೆಗೆ ವಹಿಸಲಾದ ಹಲವು ಆಡಳಿತಾತ್ಮಕ ಅಥವಾ ಕ್ರಮಕೈಗೊಳ್ಳುವ ಇಲಾಖೆಗಳಿಗೆ (line departments) ನೆರವು ನೀಡುವುದು.

(5) ಅರ್ಜಿಗಳು ಅಥವಾ ಪ್ರಸ್ತಾವನೆಗಳು ಮತ್ತು ಹೊರಡಿಸಿದ ಸ್ವೀಕೃತಿ ಪ್ರಮಾಣ ಪತ್ರದ ದಾಖಲೆಯನ್ನು ನಿಗಾವಹಿಸುವುದು ಮತ್ತು ನಿರ್ವಹಿಸುವುದು.

(6) ರಾಜ್ಯ ಮಟ್ಟದ ನೋಡಲ್ ಏಜೆನ್ಸಿಯು, ಎಲ್ಲಾ ಯೋಜನೆ ಅರ್ಜಿಗಳು, ಅನುಮೋದನೆಗಳು ಅಥವಾ ಸ್ವೀಕೃತಿಗಳ ದತ್ತಾಂಶಮೂಲವನ್ನು (database) ಕೇಂದ್ರ ಸಂಗ್ರಹವಾಗಿ ಆನ್‌ಲೈನ್ ವ್ಯವಸ್ಥೆಗಳ ಮೂಲಕ ನಿರ್ವಹಿಸುವುದು.

**ವಿವರಣೆ:** ಸ್ವೀಕೃತಿ ಪ್ರಮಾಣ ಪತ್ರದ ವ್ಯಾಪ್ತಿಯ ಅಡಿಯಲ್ಲಿ ಅಗತ್ಯವಾಗಿ ಬರಬೇಕಾದ ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳನ್ನು ಉತ್ಪಾದನಾ ಉದ್ಯಮಗಳ ಪ್ರಾರಂಭಿಕ ಮೂರು ವರ್ಷಗಳ ಅವಧಿಗಾಗಿ ಅಥವಾ ವಾಣಿಜ್ಯ ಕಾರ್ಯಾಚರಣೆಯ ಆರಂಭದ ದಿನಾಂಕದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇಲಾಖೆಗಳು ನೀಡಿದ ಒಪ್ಪಿಗೆ ನೀಡಿಕೆಗಳೆಂದು ಪರಿಗಣಿಸತಕ್ಕದ್ದು. ಸೇವೆಗಳು, ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳ ಪಟ್ಟಿಯು 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಒಪ್ಪಿಗೆ ನೀಡಿಕೆಗಳನ್ನು ಒಳಗೊಂಡಿರತಕ್ಕದ್ದು.

**4. 14ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 14ನೇ ಪ್ರಕರಣದಲ್ಲಿ ಅದನ್ನು (1) ಎಂಬುದಾಗಿ ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರುಸಂಖ್ಯೆ ನೀಡಲಾದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(2) ಅರ್ಜಿದಾರರು ಸಂಯೋಜಿತ ಅರ್ಜಿ ನಮೂನೆಯೊಂದಿಗೆ 14ನೇ ಪ್ರಕರಣದ (1)ನೇ ಉಪಪ್ರಕರಣ ಹಾಗೂ 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಅನುಕ್ರಮವಾಗಿ ಸಂಬಂಧಿತ ಶುಲ್ಕವನ್ನು ಮತ್ತು ಸ್ವಯಂ ಪ್ರಮಾಣಪತ್ರವನ್ನು ಒದಗಿಸುವ ಆಯ್ಕೆಯನ್ನು ಮಾಡಬಹುದು. ಅರ್ಜಿದಾರರು 15ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿರುವಂತೆ ಸ್ವಯಂ ಪ್ರಮಾಣ ಪತ್ರವನ್ನು ಒದಗಿಸುವ ಆಯ್ಕೆಯನ್ನು ಮಾಡದಿದ್ದ ಸಂದರ್ಭದಲ್ಲಿ ಅರ್ಜಿದಾರರು ಕೈಗಾರಿಕೆಯ ರಚನೆ ಅಥವಾ ಸ್ಥಾಪನೆಗೆ ಮೊದಲು ಎಲ್ಲಾ ಅಗತ್ಯ ಅನುಮೋದನೆಗಳನ್ನು ಪಡೆಯತಕ್ಕದ್ದು.

(3) ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, ಅನ್ವಯಿಸಬಹುದಾದ ಅಧಿನಿಯಮಗಳು, ನಿಯಮಗಳು ಇತ್ಯಾದಿಗಳ ಅಡಿಯಲ್ಲಿ ಘಟಕದ ನಿರ್ವಹಣಾ ಕಾರ್ಯಾಚರಣೆಗಾಗಿ ಸಂಬಂಧಿತ ಅರ್ಜಿಗಳನ್ನು ನಿಯಮಿಸಿದ ಕಾಲಕ್ರಮಗಳಲ್ಲಿ, ಅಂದರೆ ಸ್ವೀಕೃತಿ ಪ್ರಮಾಣ ಪತ್ರವು ಮುಕ್ತಾಯಗೊಳ್ಳುವ ಆರು ತಿಂಗಳುಗಳಿಗೆ ಮೊದಲು ಸಲ್ಲಿಸತಕ್ಕದ್ದು. 13ನೇ ಪ್ರಕರಣದ (3)ನೇ ಉಪಪ್ರಕರಣದ ಅನುಸಾರವಾಗಿ ಸದರಿ ಕೈಗಾರಿಕೆಗೆ ಅಥವಾ ಉದ್ಯಮಕ್ಕೆ ಹೊರಡಿಸಲಾದ ಸ್ವೀಕೃತಿ ಪ್ರಮಾಣ

ಪತ್ರವು ಈ ಉಪಪ್ರಕರಣದ ಅಡಿಯಲ್ಲಿ ಅನುಮೋದನೆಗಳನ್ನು ಪಡೆಯುವುದಕ್ಕಾಗಿ ಅವಶ್ಯಪೂರ್ವ ದಸ್ತಾವೇಜು ಆಗಿರತಕ್ಕದ್ದು.

**ವಿವರಣೆ:** 2ನೇ ಪ್ರಕರಣದ (iii)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿದ ಅನ್ವಯಿಸಬಹುದಾದ ಅಧಿನಿಯಮಗಳು ಮತ್ತು ನಿಯಮಗಳ ಅಡಿಯಲ್ಲಿ ಅಗತ್ಯಪಡಿಸಿದಂತೆ ಸ್ವೀಕೃತಿ ಪ್ರಮಾಣ ಪತ್ರವು ಎಲ್ಲಾ ಅನುಮೋದನೆಗಳು ಅಥವಾ ಒಪ್ಪಿಗೆ ನೀಡಿಕೆಗಳಿಗಾಗಿ ಅನುಮೋದನಾ ದಸ್ತಾವೇಜು ಆಗಿರತಕ್ಕದ್ದು ಹಾಗೂ ನಿರ್ಮಾಣ ಅಥವಾ ಸ್ಥಾಪನೆಯ ಪ್ರಾರಂಭಕ್ಕೆ ಮೊದಲು ಅಗತ್ಯವಿರುವ ಅನುಮೋದನೆಗಳಾದ ಅನುಮೋದನೆ ಅಥವಾ ಒಪ್ಪಿಗೆ ನೀಡಿಕೆಯನ್ನು ಸ್ವೀಕರಿಸಿದೆ ಎಂಬುದಾಗಿ ಭಾವಿಸತಕ್ಕದ್ದು.

(4) (3)ನೇ ಉಪಪ್ರಕರಣದ ಅನುಸಾರವಾಗಿ ಅನುಮೋದನೆಗಳನ್ನು ಪಡೆಯಲಾಗಿಲ್ಲದ ನಿದರ್ಶನಗಳಲ್ಲಿ ಸ್ವೀಕೃತಿ ಪ್ರಮಾಣಪತ್ರದ ಸಿಂಧುತ್ವವು ನಿಂತುಹೋಗತಕ್ಕದ್ದು.

(5) (3) ಮತ್ತು (4)ನೇ ಉಪಪ್ರಕರಣಗಳ ಉಲಂಘನೆಯ ನಿದರ್ಶನಗಳಲ್ಲಿ, ಸಂಬಂಧಿತ ಕ್ರಮವಹಿಸುವ ಇಲಾಖೆಗಳು ಅಥವಾ ಏಜೆನ್ಸಿಗಳು ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮಗಳನ್ನು ಆರಂಭಿಸತಕ್ಕದ್ದು.

**5. 15ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(3) ಉತ್ಪಾದನಾ ಕೈಗಾರಿಕೆಗಳು ಅಥವಾ ಉತ್ಪಾದನಾ ಉದ್ಯಮಗಳು ಒದಗಿಸಬೇಕಾದ ಸ್ವಯಂ ಪ್ರಮಾಣ ಪತ್ರವು ಶಪಥಪತ್ರದ ಸ್ವರೂಪದಲ್ಲಿರತಕ್ಕದ್ದು, ಅದು ಸಂಯೋಜಿತ ಅರ್ಜಿ ನಮೂನೆಯನ್ನು (14ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ) ಸಲ್ಲಿಸಲು ಕಡ್ಡಾಯ ದಸ್ತಾವೇಜು ಆಗಿರತಕ್ಕದ್ದು. ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು, 2ನೇ ಪ್ರಕರಣದ (iii)ನೇ ಖಂಡದಲ್ಲಿ ಪರಿಭಾಷಿಸಿದ ಅನ್ವಯಿಸಬಹುದಾದ ಎಲ್ಲಾ ಅಧಿನಿಯಮಗಳು, ನಿಯಮಗಳು, ಇತ್ಯಾದಿಯನ್ನು ಅವು ಪಾಲಿಸತಕ್ಕದ್ದಾಗಿ ಒಪ್ಪಿಗೆ ನೀಡಿಕೆಯ ಮೇಲೆ ಮುಚ್ಚಳಿಕೆಯೊಂದನ್ನು ಒದಗಿಸತಕ್ಕದ್ದು, ಹಾಗೂ ಆನಂತರದಲ್ಲಿ ಯಾವುದೇ ಉಲಂಘನೆಯು ಕಂಡುಬಂದಲ್ಲಿ ಈ ಅಧಿನಿಯಮದ ಅಥವಾ ಅನ್ವಯಿಸಬಹುದಾದ ಯಾವುದೇ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮಕ್ಕಾಗಿ ಅದು ಹೊಣೆಯಾಗಿರತಕ್ಕದ್ದು. ಉತ್ಪಾದನಾ ಕೈಗಾರಿಕೆ ಅಥವಾ ಉತ್ಪಾದನಾ ಉದ್ಯಮವು ಸಲ್ಲಿಸಿದ ಅರ್ಜಿಯು ಘಟಕದ ಅಂತರ್ಗತ ಸೇವೆಗಳಿಗಾಗಿ ನಿಯಮಿಸಿದ ಅಪೇಕ್ಷಿತ ಶುಲ್ಕದೊಂದಿಗೆ ಇರತಕ್ಕದ್ದು."

**6. 16ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 16ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**" 16.ತಪಾಸಣೆ.-** ಸ್ವೀಕೃತಿ ಪ್ರಮಾಣ ಪತ್ರದ ಸಿಂಧುತ್ವದ ಅವಧಿಯಲ್ಲಿ ತಪಾಸಣೆಗಳನ್ನು ವಾರೆಂಟು ಮಾಡಲಾದ ನಿದರ್ಶನಗಳಲ್ಲಿ, ನೋಡಲ್ ಏಜೆನ್ಸಿಯ ಸಮಾಲೋಚನೆ ಮತ್ತು ಸಂಬಂಧಿತ ಇಲಾಖಾ ಮುಖ್ಯಸ್ಥರ ಅನುಮೋದನೆಯೊಂದಿಗೆ ನಿಯಮಿಸಬಹುದಾದ ಅಂಥ ಮಾರ್ಗಸೂಚಿಗಳಿಗೆ ಒಳಪಟ್ಟು, ಅಂಥ ವಿಧಾನದಲ್ಲಿ ಸಂಬಂಧಿತ ಇಲಾಖೆಗಳ ಅಂಥ ಅಧಿಕಾರಿಗಳ ಮೂಲಕ ತಪಾಸಣೆಯನ್ನು ಕೈಗೊಳ್ಳತಕ್ಕದ್ದು."

**7. 19ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 19ನೇ ಪ್ರಕರಣದಲ್ಲಿ, 19ನೇ ಪ್ರಕರಣವನ್ನು ಅದರ (1) ನೇ ಉಪಪ್ರಕರಣವೆಂದು ಮರುಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರುಸಂಖ್ಯೆ ನೀಡಲಾದ (1)ನೇ ಉಪಪ್ರಕರಣದ ತರುವಾಯ ಈ ಮುಂದಿನವನ್ನು ಸೇರಿಸತಕ್ಕದ್ದು, ಎಂದರೆ:-

"(2) ಯಾವುದೇ ಉತ್ಪಾದನಾ ಕೈಗಾರಿಕೆ ಅಥವಾ ಉದ್ಯಮವು ಸ್ವೀಕೃತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ ಸಲ್ಲಿಸುವಾಗ ನೋಡಲ್ ಏಜೆನ್ಸಿಗೆ ನೀಡಿದ ಮುಚ್ಚಳಿಕೆ ಅಥವಾ ಸ್ವಯಂ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿದ ಷರತ್ತುಗಳನ್ನು ಪಾಲಿಸುವಲ್ಲಿ ವಿಫಲವಾದರೆ ಅಥವಾ ಕೈಗಾರಿಕಾ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅನ್ವಯಿಸಬಹುದಾದ ಅಧಿನಿಯಮ ಅಥವಾ ನಿಯಮದಲ್ಲಿನ ಯಾವುದೇ ಖಂಡವನ್ನು ಉಲ್ಲಂಘಿಸಿದರೆ, ಅಪರಾಧ ನಿರ್ಣೀತವಾದ ಮೇಲೆ ಮೊದಲ ಅಪರಾಧಕ್ಕಾಗಿ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ಮತ್ತು ಎರಡನೇ ಹಾಗೂ ಮುಂದುವರಿದ ಅಪರಾಧಕ್ಕಾಗಿ ಎರಡು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯೊಂದಿಗೆ ದಂಡಿತವಾಗತಕ್ಕದ್ದು ಇದರ ಜೊತೆಗೆ, ಸಂಬಂಧಿತ ಇಲಾಖೆಗಳು ಸಂಬಂಧಪಟ್ಟ ಅಧಿನಿಯಮಗಳ ಅಡಿಯಲ್ಲಿ ದಂಡನಾ ಕ್ರಮವನ್ನು ಪ್ರಾರಂಭಿಸತಕ್ಕದ್ದು.

(3) ಪರಿಭಾವಿತ ಒಪ್ಪಿಗೆ ನೀಡಿಕೆ ಅವಧಿಯಲ್ಲಿ, ನಿಗದಿತ ಕಾಲಕ್ರಮಗಳೊಳಗಾಗಿ ಸಂಬಂಧಿತ ಇಲಾಖೆಯ ಅಧಿಕಾರಿಯು ಸೇವೆ ಅಥವಾ ಅನುಮೋದನೆಯನ್ನು ಒದಗಿಸದಿದ್ದ ಸಂದರ್ಭದಲ್ಲಿ, ಸಕಾಲ ಸೇವೆಗಳ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 1) ಉಪಬಂಧಗಳ ಅನುಸಾರವಾಗಿ ಅಂಥ ಅಧಿಕಾರಿಯ ವಿರುದ್ಧ ದಂಡನಾ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು."

**8. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಕೈಗಾರಿಕೆಗಳ **(**ಸೌಲಭ್ಯ**)** (ತಿದ್ದುಪಡಿ) ಅಧ್ಯಾದೇಶ, 2020ನ್ನು (2020ರ ಕರ್ನಾಟಕ ಅಧ್ಯಾದೇಶ 12) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ

## PARLIAMENTARY AFFAIRS AND LEGISLATION SECRETARIAT

### NOTIFICATION

### NO.DPAL 52 SHASHANA 2020, BENGALURU, DATED: 19.10.2020

Ordered that the translation of Karnataka kigarikegala (Soulabhya) (tiddupadi) Adhiniyama, 2020 (Karnataka Act 29 of 2020) in English language, be published as authoritative text as required by clause (3) of Article 348 of the Constitution of India in the Karnataka Gazette for general information.

The following translation of Karnataka kigarikegala (Soulabhya) (tiddupadi) Adhiniyama, 2020 (Karnataka Act 29 of 2020) in English language, is published in the Official Gazette under the authority of the Governor of Karnataka under clause (3) of Article 348 of the Constitution of India

## KARNATAKA ACT NO 29 OF 2020

(First Published in the Karnataka Gazette Extra-ordinary on the

19th day of October, 2020)

### THE KARNATAKA INDUSTRIES (FACILITATION) (AMENDMENT) ACT, 2020

(Received the assent of the Governor on the 16th day of October, 2020)

An Act further to amend the Karnataka Industries (facilitation) Act, 2002.

Whereas it is expedient to amend the Karnataka Industries (Facilitation) Act, 2002 (Karnataka Act 45 of 2003) for the purposes hereinafter appearing;

Be it enacted by the Karnataka State Legislature in the seventy first year of the Republic of India, as follows:-

**1. Short title and commencement.-** (1) This Act may be called the Karnataka Industries (Facilitation) (Amendment) Act, 2020.

(2) It shall be deemed to have come into force with effect from 2nd day of July, 2020.

**2. Amendment of section 2.-** In the Karnataka Industries (Facilitation) Act, 2002 (Karnataka Act 45 of 2003) (hereinafter referred to as the principal Act) in section 2,-

(i) In clause (ia), the following shall be inserted at the end, namely:-

"the Legal Metrology Act, 2009 (Central Act 1 of 2010) or rules made there under, the Karnataka Municipalities Act, 1964 (Karnataka Act 22 of 1964), the Karnataka Municipal Corporations Act, 1976 (Karnataka Act 14 of 1977), the Karnataka Grama Swaraj and Panchayat Raj Act, 1993 (Karnataka Act 14 of 1993), the Karnataka Industrial Area Development Act, 1966 (Karnataka Act 18 of 1966), the Karnataka Fire Force Act, 1964 (Karnataka Act 42 of 1964), the Karnataka preservation of Trees Act, 1976 (Karnataka Act 76 of 1976), the Karnataka Forest Rules, 1969, the Karnataka Land Revenue Act, 1964 (Karnataka Act 12 of 1964), the Karnataka Land Reforms Act, 1961 (Karnataka Act 10 of 1962), the Bangalore Development Authority Act, 1976 (Karnataka Act 12 of 1976), the Karnataka Urban Development Authorities Act, 1987 (Karnataka Act 34 of 1987), the Karnataka Town and Country Planning Act, 1961 (Karnataka Act 11 of 1963), and the policies of the Karnataka State Small scale Industries Development Corporation."

(ii) after clause (vii), the following shall be inserted, namely:-

"(vii-a) "Manufacturing Enterprise" means the enterprise engaged in the manufacture or production of goods pertaining to any industry specified in the first schedule to the Industries (Development and Regulation) Act, 1951 or employing plant and machinery in the process of value addition to the final product having a distinct name or character or use.

(vii-b) "Manufacturing industry" means the industry which involves in the manufacturing and processing of items and indulges in either creation of new commodities or in value addition."

**3. Amendment of section 13.-** In section 13 of the principal Act,

(i) in sub-section (1), after clause (g), the following shall be inserted, namely:-

"(h) on receipt of combined application form from the manufacturing industries or enterprises, the respective nodal agency shall issue an acknowledgment certificate, after obtaining the approval by the investment committees, namely State High Level Clearance Committee, State Level Single Window Clearance Committee or District Level Single Window Clearance Committee, in the prescribed form, to the applicant:

Provided that, land shall be considered for the purpose for which it is being acquired or permission for which it is applied for."

(ii) after sub-section (2), the following shall be inserted, namely:-

"(3) In respect of manufacturing industry or manufacturing enterprise, the acknowledgement certificate issued under clause (h) of sub-section (1) shall deemed to be the clearances for setting up or establishment of Industry as defined in sub-section (iii) of section 2, granted or issued by the respective departments for an initial period of three years or till the date of commencement of commercial operations, whichever is earlier, from the date of its acknowledgement:

Provided that, such deemed clearance for setting up of Industry shall be only to the Land for the purpose for which it is being acquired or permission is applied for. Further, there shall not be any deviation in construction with reference to the building bye-law and to the land use specified in any applicable Act or the master plan, wherever such plan is in force.

Provided further that, the approvals shall not entitle the manufacturing industry or manufacturing enterprise to use a land without clear title or lands falling under dispute, restricted categories etc.,. The ceiling limit of area that can be acquired or utilized under the provisions of this Act shall be limited as per the provisions under section 109 of the Karnataka Land Reforms Act, 1961(Karnataka Act 10 of 1962).

**Explanation:** Where the manufacturing industry or manufacturing enterprise establishes as per sub-section (3), the applicant has to take necessary clearances as per sub-sections (2) and (3) of section 14, before commencement of commercial operation.

(4) To assist various administrative or line departments whose powers are devolved upon the nodal agency under various legislations, Acts, rules or regulations for obtaining the approvals and monitoring the implementation of the project.

(5) To monitor and maintain the record of the applications or proposals and acknowledgement certificate issued.

(6) The state level nodal agency to maintain the database of all the project applications, approvals or acknowledgements as a central repository through the online systems.

**Explanation:** List of services, approvals or clearances that are required to be brought under the purview of acknowledgement certificate shall be considered as clearances by the departments for an initial period of three years or till the date of commencement of commercial operation, whichever is earlier for manufacturing industry or manufacturing enterprise. The list of the services, approvals or clearances shall include clearances as defined in clause (iii) of section 2.

**4. Amendment of section 14.-** In section 14 of the Principal Act, shall be re-numbered as “(1)” thereof and after so re-numbered, the following shall be inserted, namely:-

“(2) the applicant may opt to furnish the combined application form along with relevant fee and self certification under sub-section (1) of section 14 and sub-section (3) of section 15, respectively. In the event of the applicant not opting for furnishing the self-certification as under sub-section (3) of section 15, the applicant shall take all the necessary approvals prior to setting up or establishment of the industry.

(3) The manufacturing industry or manufacturing enterprise shall make relevant applications for operationalising the Unit under applicable Acts, rules, etc. within the prescribed timelines, that is six months before the expiry of the acknowledgement certificate. The acknowledgement certificate as issued to the said industry or enterprise as per sub-section (3) of section 13 shall be the prerequisite document for getting approvals under this sub-section.

**Explanation:** The acknowledgement certificate shall be the approval document for all the approvals or clearances as required under applicable Acts and rules specified in clause (iii) of section 2 and the approvals that require approval or clearance before the commencement of construction or establishment shall be deemed to be received.

(4) In instances where the approvals are not sought as per sub-section (3), the validity of the acknowledgement certificate shall cease.

(5) In instances of violation of sub-sections (3) and (4), the relevant line departments or agencies shall initiate the penal actions under relevant Acts.”

**5. Amendment of section 15.-**In section 15 of the principal Act after sub-section (2), the following shall be inserted, namely:-

“(3) The self-certification to be provided by the manufacturing industries or manufacturing enterprises shall be in form of an Affidavit which shall be the mandatory document for submission of the Common Application Form (as specified in section 14). The manufacturing industry or manufacturing enterprise shall furnish an undertaking that on clearance they shall be abide by all the applicable Acts, rules etc. as defined in clause (iii) of section 2 and any deviation found at a later stage shall be liable for penal action under this Act or any applicable Acts. The application thus made by the manufacturing Industry or manufacturing Enterprises shall be along with the requisite fee prescribed for the services that are implied of the unit.”

**6. Substitution of section 16.-** For section 16 of the Principal Act, the following shall be substituted, namely:-

“**16. Inspection.-** During the period of validity of the acknowledgement certificate, in instances where inspections are warranted, the inspection shall be carried out by such officers of the respective departments in consultation with the nodal agency and approval of the Head of the department concerned, in such manner, subject to such guidelines as may be prescribed.”

**7. Amendment of section 19.-** In section 19 of the Principal Act, section 19 shall be re-numbered as sub-section (1) thereof and after sub-section (1) so re-numbered, the following shall be inserted, namely:-

“(2) Any manufacturing industry or enterprise which fails to comply with the conditions specified in the undertaking or the self certification given to the nodal agency while applying for acknowledgement certificate or for violating any clause in the applicable Act or rule, while implementing the industrial projects, shall on conviction be punishable with fine which may extend to one lakh rupees for the first offence and for the second and subsequent offence, with fine which

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



may extend to two lakh rupees. In addition, the departments concerned shall initiate penal action under respective Acts.

(3) In case where the concerned department officer has not provided the service or approval, during the period of deemed clearance, within the stipulated timelines, penal actions shall be taken against such Officer as per the provisions of the Sakaala Services Act, 2011 (Karnataka Act 1 of 2012)."

**8. Repeal and savings.-**(1) The Karnataka Industries (Facilitation) (Amendment) Ordinance, 2020 (Karnataka Ordinance 12 of 2020) is hereby repealed.

(2) Notwithstanding such repeal anything done or any action taken under the principal Act, as amended by the said Ordinance, shall be deemed to have been done or taken under principal Act, as amended by this Act.

The above translation of Karnataka Kigarikegalu (soulabhya) (thiddupadi) Adhiniyama, 2020 (Karnataka Act 29 of 2020) shall be authoritative text in the English language under by clause (3) of Article 348 of the Constitution of India.

**VAJUBHAI VALA**
**GOVERNOR OF KARNATAKA**

By Order and in the name of
the Governor of Karnataka,

**(K. DWARAKANATH BABU)**
Secretary to Government
Department of Parliamentary Affairs
and Legislation

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE